ಶ್ರೀ ಎನ್. ಹುಚ್ಚಮಾಸ್ತಿಗೌಡ:— ಖಂಡಿತವಾಗಿ ನಾನು ಇಲ್ಲಿನ ಸ್ಥಳದಲ್ಲಿರುವ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಇವರಿಗೆ ಅವಶ್ಯಕವಾಗಿ ಬೇಕಾದರೆ ಒಬ್ಬಿಬ್ಬರು ಗುಮಾಸ್ತರನ್ನು ಇದೇ ಕೆಲಸಕ್ಕಾಗಿ ಬೇಕಾದರೂ ಅವರಿಗೆ ಒದಗಿಸಿಕೊಟ್ಟು ಆದಷ್ಟು ಜಾಗ್ರತೆ ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Land Army Scheme in Byadgi Taluk.

153. SRI B. G. BANAKAR (Hirekerur)– Will the Minister for Community Development and Social Welfare be pleased to state.

(*a*) the name of all works undertaken and the amount spent or such works in the Land Army Scheme in Bydagi Taluk since its inception upto 30—6—1974.

(*b*) the reasons for not providing Road Rollers to Land Army iby the PWD and as, a result of which the work was held up.

(*c*) whether there is any proposal to expand this scheme and extend it to the neghbhouring and other Taluks in the State?

SRI N. RACHAIAH (Minieter for Community Development and Social Welfare).—

(*a*) Statement placed on the Table of the House.*

(*b*) One Road Roller has been made available to the Land Army Project in Byadagi Taluk. depending on the availability with the PWD.

(*c*) No.

ಶ್ರೀ ಬಿ. ಜಿ ಬಣಕಾರ:— ಲ್ಯಾಂಡು ಆರ್ಮಿಗಾಗಿ ಒಂದು ಕಾರ್ಪೊರೇಷನ್ ಮಾಡಿ ಇದರ ಮೂಲಕ ಬಡವರಿಗೆ ಕೆಲಸಸಿಗುವಂತೆ ಮಾಡುತ್ತಾರೆಂಬು ಇತ್ತು. ಇದನ್ನು ಯಾವಾಗ ಜಾರಿಗೆ ತರುತ್ತೀರಿ ಮತ್ತು ಇದುವರೆಗೆ ಇವರಿಗೆ ಎಷ್ಟು ಕಡೆ ಕೆಲಸಗಳನ್ನು ಒದಗಿಸಿದ್ದೀರಿ ? ಇದು ರಾಜ್ಯಕ್ಕೆ ಪೂರಾ ಅನ್ವಯವಾಗುತ್ತದೆಯೇ ?

† ಶ್ರೀ ಎನ್. ರಾಚಯ್ಯ.— ಇದು ರಾಜ್ಯಕ್ಕೆಲ್ಲ ಅನ್ವಯವಾಗಲಿ ಎಂದು ಇಂತಹ ಒಂದು ಕಾರ್ಪೊರೇಷನ್ ಮಾಡಬೇಕೆಂದು ಇದೆ. ಇದರಲ್ಲಿ ಬಡಜನರಿಗೆ ಎಲ್ಲಿ ಕೆಲಸಗಳು ಸಿಗುವುದಿಲ್ಲವೋ ಮತ್ತು ಎಲ್ಲಿ ಕಂಟ್ರಾಕ್ಟರುಗಳು ಸಿಗುವುದಿಲ್ಲವೋ ಅಂತಹ ಕಡೆಗಳಲ್ಲಿ ಲ್ಯಾಂಡು ಕಾರ್ಪೊರೇಷನ್‌ವರು ಕೆಲಸಗಳನ್ನು ತೆಗೆದುಕೊಂಡು ಬಡ ಜನರ ಮೂಲಕ ಮಾಡಿಸಬೇಕು ಎನ್ನುವುದು ಇದರ ಉದ್ದೇಶ. ಇದು ರಾಜ್ಯಕ್ಕೆ ಅನ್ವಯವಾಗುವಂತೆ ಮಾಡುವ ಒಂದು ಯೋಜನೆ.

ಶ್ರೀ ಬಿ, ಜಿ. ಬಣಕಾರ:— ಬ್ಯಾಡಗಿ ತಾಲ್ಲೂಕಿನಲ್ಲಿ ರಸ್ತೆಗಳ ಕೆಲಸಗಳಾಗದೆ ಬಹಳ ರಸ್ತೆಗಳು ಕೆಟ್ಟು ಹೋಗಿವೆ. ಮತ್ತು ಹಾನಗಲ್ಲ ಹಾಗೂ ಹಿರೇಕೆರೂರು ಹೆದ್ದಾರಿಗೆ ಕೂಡಿಸುವ ರಸ್ತೆಗಳೂ ಹಾಳಾಗಿವೆ. ಇದರಿಂದ ತಾಲ್ಲೂಕಿನಿಂದ ಜಿಲ್ಲೆಗಳಿಗೆ ಹೋಗಲು ಜನತೆಗೆ ಬಹು ತ್ರಾಸಾಗುತ್ತಿದೆ ಇಂತಹ ಹೆದ್ದಾರಿ ರಸ್ತೆಗಳನ್ನು ದುರಸ್ತುಮಾಡುವುದರ ಬಗ್ಗೆ ತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಅಗತ್ಯವಾದ ಎಲ್ಲ ರಸ್ತೆಗಳ ಕೆಲಸಗಳನ್ನು ಈ ಲ್ಯಾಂಡು ಆರ್ಮಿ ಕಾರ್ಪೊರೇಷನ್ ಮೂಲಕ ಮಾಡಿಸಲು ಆದಷ್ಟು ಪ್ರಯತ್ನ ಮಾಡುತ್ತಿದ್ದೇವೆ,

*Copy placed in the Karnataka Legislature Library *vide* No9/22-8-74

ಶ್ರೀ ಕೆ ಹೆಚ್. ಹನುಮೇಗೌಡ:– ಲ್ಯಾಂಡು ಆರ್ಮಿಕೆಲಸಗಳಿಗಾಗಿ ಕೇಂದ್ರ ಸರಕಾರದಿಂದೇನಾದರೂ ಹಳ ಸಹಾಯ ಬರುತ್ತಿದೆಯೇ ? ಇಲ್ಲವೇ ರಾಜ್ಯ ಸರಕಾರ ಇದಕ್ಕೆ ಹಣ ಸಹಾಯ ಮಾಡುತ್ತಿದೆಯೆ? ಅಲ್ಲದೇ ಲ್ಯಾಂಡು ಆರ್ಮಿ ಮೂಲಕ ಮಾಡಿಸಿದ ಕೆಲಸಗಳ ಬಿಲ್ಲುಗಳು ನಿಧಾನವಾಗುತ್ತಿರುವುದರ ತಮ್ಮ ಗಮನಕ್ಕೆ ಬಂದಿದೆಯೇ ಇದನ್ನು ಕಾರ್ಮಿಕರಿಗೆ ತೊಂದರೆಯಾಗದಂತೆ ಮಾಡಲು ಯತ್ನಮಾಡುತ್ತೀರಾ?

ಶ್ರೀ ಎನ್. ರಾಚಯ್ಯ:— ಕೇಂದ್ರ ಸರಕಾರವಾಗಲೀ ರಾಜ್ಯ ಸರಕಾರವಾಗಲೀ ಇದಕ್ಕೆ ಸಹಾಯ ಮಾಡುತ್ತಿಲ್ಲ. ರಾಜ್ಯ ಸರಕಾರ ಮಂಜೂರು ಮಾಡಿರುವ ಕೆಲಸಗಳನ್ನು ಇದರ ಮೂಲಕ ಮಾಡಿಸಲು ಮತ್ತು ಬಡಜನರಿಗೆ ಕೆಲಸಗಳು ಸಿಗಲಿಎನ್ನುವ ಉದ್ದೇಶದಿಂದ ಇದನ್ನು ಮಾಡುತ್ತಿರುವುದು. ಇದರ ಬಿಲ್ಲುಗಳನ್ನು ಎಲ್ಲೂ ತಡೆ ಹಿಡಿದಿಲ್ಲ ಯಾವುದಾದರೂ ನಿರ್ದಿಷ್ಟವಾದ ಕಡೆ ಬಿಲ್ಲುಗಳು ತಡವಾಗಿದೆ ಎಂದು ಗಮನಕ್ಕೆ ತಂದರೆ ಇದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೋಣಾಡೂರು ಲಿಂಗಪ್ಪ: — ಬ್ಯಾಡಗಿ ತಾಲ್ಲೂಕಿನಲ್ಲಿ ಲ್ಯಾಂಡ್ ಆರ್ಮಿಗಾಗಿ ಹಾಗೂ ಇದರ ಸಿಬ್ಬಂದಿವರ್ಗದವರಿಗೆ ಎಷ್ಟು ಖರ್ಚಾಗುತ್ತಿದೆ ಮತ್ತು ಎಷ್ಟು ಕಾರ್ಮಿಕರುಗಳಿಗೆ ಕೆಲಸ ಕೊಡಬೇಕೆಂದು ಮಾಡಿದ್ದೀರಿ ?

ಶ್ರೀ ಎನ್. ರಾಚಯ್ಯ:— ಲಾಂಡು ಆರ್ಮಿ ಎಂದು ಆರಂಭಮಾಡಿರುವುದು ಇಡೀ ರಾಜ್ಯಕ್ಕೆ ಅನ್ವಯವಾಗುವ ಹಾಗೆ ಇದರಲ್ಲಿ ರಾಜ್ಯದ ಕೆಲಸಗಳನ್ನು ಮಂಜೂರು ಮಾಡಿದ ನಂತರ ಇದರ ಮೂಲಕ ಕೆಲಸಗಳನ್ನು ಕೊಟ್ಟು ಆಯಾಸ್ಥಳದಲ್ಲಿರುವವರಿಂದ ಮಾಡಿಸಲಾಗುತ್ತದೆ.

ಶ್ರೀ ಬಿ. ಜೆ. ಬಣಕಾರ — (ಬ) ಗೆ ಉತ್ತರವಾಗಿ ರೋಡು ರೋಲರುಗಳನ್ನು ಕೊಡಲಾಗಿದೆ ಎಂದು ಹೇಳುತ್ತಾರೆ. ಇಲ್ಲಿರುವ ಜೂಡಂಬಿ ಹಿರೇಕೂರು ಕುಡೂರಸ್ತೆ ಮಾಡಲು ಇಲ್ಲಿ ಜಲ್ಲಿ ಬಿದ್ದಿವೆ ಇದಕ್ಕೆ ರೋಡು ರೋಲರುಸಿಗದೇ ಇಲ್ಲಿನ ರಸ್ತೆ ಮಾಡಲಾಗಲಿಲ್ಲ. ಸರಕಾರ ಇದರ ಬಗ್ಗೆ ರೋಡು ರೋಲರು ಒದಗಿಸಿ ತೀವ್ರವಾಗಿ ಇದರ ಕೆಲಸಗಳನ್ನು ಆಗುವ ಹಾಗೆ ಮಾಡುತ್ತಾರೆಯೇ ?

ಶ್ರೀ ಎನ್. ರಾಚಯ್ಯ:— ಲ್ಯಾಂಡು ಆರ್ಮಿಯವರಿಗೆ ರೋಲರುಗಳನ್ನು ಒದಗಿಸಿ ಕೊಟ್ಟು ಕೆಲಸ ಮಾಡುತ್ತಿದ್ದೇವೆ. ಎಲ್ಲಾದರೂ ಕೆಲಸಗಳಾಗಿಲ್ಲ ಎಂದು ನಿರ್ದಿಷ್ಟವಾಗಿ ತಿಳಿಸಿದರೆ ಅಲ್ಲಿ ಕೆಲಸಗಳನ್ನು ಮಾಡಿಸಬಹುದು.

* *Rat menace in Gulbarga District.*

178. SRI PRABHAKAR TELKAR (Kalgi) .—Will the Minister for Agriculture and Animal Husbandry be pleased to state :—

(*a*) whether the Government is aware that alarming situation has been created by Rat menace in Gulbarga District and Chittapur and Kalagi area in particular during the past three months ;

(*b*) if so, the extent of loss caused to the standing crops and seeds ;

(*c*) whether the Government has taken any immediate steps to prevent this menace ;

(*d*) if so, the nature of action taken ?

SRI N. CHIKKE GOWDA —(Minister for Agriculture and Animal Husbandry) .—

(*a*) Yes.

(*b*) Moderate The damage has been due to the fact that the seeds sown are eaten up by rats ; As a result, resowing has become necessary.